**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೧೩೩/೨೦೧೮ ಸಿ.ಡಬ್ಲ್ಯೂ–೧೬ ಪಿ.ಡಬ್ಲ್ಯೂ-೦೭

| | | |
|---|---|---|
| ಹೆಸರು | ಃ | ಹಾಲೇಶ |
| ತಂದೆಃಗಂಡ | ಃ | ಆಂಜನೆಯಪ್ಪ |
| ವಯಸ್ಸು | ಃ | ೪೩ ವರ್ಷ |
| ಉದ್ಯೋಗ | : | ಆಂತರಿಕ ಭದ್ರತಾ ವಿಭಾಗ |
| ವಾಸಸ್ಥಳ | ಃ | ಬೆಂಗಳೂರು |

ದಿನಾಂಕಃ ೨೩.೦೯.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

ಕಲಂ ೨೯೯ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆಃ

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ೦೧.೦೫.೨೦೧೭ ರಿಂದ ೨೫.೦೨.೨೦೧೩ ವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿ. ೦೬.೦೬.೨೦೧೭ ರಂದು ನಾನು ಠಾಣಾ ಅಮಲ್ದಾರ ಕರ್ತವ್ಯದಲ್ಲಿದ್ದಾಗ ಚಾಸಾ-೧ ವರು ಠಾಣೆಗೆ ಬಂದು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೧೧೨/೨೦೧೭ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-೧ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೧(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ.ದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೧೧ ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-೧೧(ಎ) ಎಂದು ಗುರುತಿಸಲಾಯಿತು.

ಅದೇ ದಿನ ತನಿಖೆಯನ್ನು ಕೈಗೆತ್ತಿಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-೧ ರವರು ತೋರಿಸಿದ ಜಾಗದಲ್ಲಿ ಚಾಸಾ-೨ ಮತ್ತು ೩ ರವರ ಸಮಕ್ಷಮ ಬೆಳಿಗ್ಗೆ ೧೦.೦೦ ರಿಂದ ೧೧.೦೦ ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿ ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ಪಂಚನಾಮೆಯಲ್ಲಿರುವ

ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ-೧೨ ಎಂದು ಸಹಿಯನ್ನು ನಿಪಿ-೧೨(ಎ) ಎಂದು ಗುರುತಿಸಲಾಯಿತು, ಪಂಚನಾಮೆ ಕಾಲಕ್ಕೆ ೧೮ ಹಿಡಿಗಾತ್ರದ ಕಲ್ಲುಗಳು, ದ್ವಿಚಕ್ರ ವಾಹನದ ಒಡೆದ ಲೈಟಿನ ಗಾಜಿನ ಚೂರುಗಳು, ಒಡೆದ ಟೈಲ್ಸ ಚೂರುಗಳು, ಆರು ಸ್ವಲ್ಪ ಗ್ರಾತ್ರದ ಕಲ್ಲುಗಳನ್ನು ಜಪ್ತಿಪಡಿಸಿಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ಕಡತದಲ್ಲಿ ಅಳವಡಿಸಿಕೊಂಡೆನು. ಅದೇ ದಿನ ತನಿಖೆಯನ್ನು ಮುಂದುವರೆಸಿ ಚಾಸಾ-೫ ರಿಂದ ೧೧ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಆರೋಪಿತರ ಪತ್ತೆ ಕುರಿತು ಚಾಸಾ-೧೨ ರಿಂದ ೧೫ ರವರನ್ನು ನೇಮಕ ಮಾಡಿರುತ್ತೇನೆ. ಅವರು ಪತ್ತೆ ಕುರಿತು ಹೋಗಿ ಬಂದು ವರದಿಯನ್ನು ಸಲ್ಲಿಸಿರುತ್ತಾರೆ. ಅವುಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ೩ ರಿಂದ ೧೦ ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ೩(ಬಿ) ರಿಂದ ನಿಪಿ-೧೦(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಾಪರ್ಟಿಗಳ ಲಾಸ್ ಎಷ್ಟು ಆಗಿದೆ ಎಂದು ಪಂಚರ ಸಮಕ್ಷಮ ಅಂದಾಜು ಪಟ್ಟಿಯನ್ನು ತಯಾರಿಸಿ ಕಡತದಲ್ಲಿ ಅಳವಡಿಸಿಕೊಂಡೆನು. ತನಿಖೆ ಪೂರ್ಣಗೊಂಡ ಕಾರಣ ಕಡತಗಳೆಲ್ಲವನ್ನು ಪರಿಶೀಲಿಸಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಇದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ದಿ.೧೦.೧೧.೨೦೧೨ ರಂದು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಆರೋಪಿತರ ತಲೆ ಮರೆಸಿಕೊಂಡಿರುತ್ತಾನೆ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.